# ಕರ್ನಾಟಕ ಲೋಕಾಯುಕ್ತ

ಸಂ.ಕಂಪ್ಲೇಂಟ್.ಉಪಲೋಕ್/ಬಿ.ಡಿ-3537/2015ಡಿಆರ್‌ಇ-5

ಬಹುಮಹಡಿಗಳ ಕಟ್ಟಡ,
ಡಾ: ಅಂಬೇಡ್ಕರ್ ವೀಧಿ,
ಬೆಂಗಳೂರು-560 001
ದಿನಾಂಕ:15-02-2018

***ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1)ರ ಅನ್ವಯ ವರದಿ***

ವಿಷಯ: ಶ್ರೀ ಕೊಂಚೆ ಶಿವರುದ್ರಪ್ಪ, ರಾಜ್ಯ ಪ್ರಧಾನ ಕಾರ್ಯದರ್ಶಿಗಳು, ರಾಷ್ಟ್ರೀಯ ಕಿಸಾನ ಸಂಘ, ಕೂನಬೇವು ಗ್ರಾಮ, ಚಿತ್ರದುರ್ಗ ತಾಲ್ಲೂಕು ಮತ್ತು ಜಿಲ್ಲೆ ಇವರು ಸಲ್ಲಿಸಿರುವ ದೂರಿನ ಬಗ್ಗೆ.

****

ಈ ದೂರನ್ನು ಶ್ರೀ ಕೊಂಚೆ ಶಿವರುದ್ರಪ್ಪ, ರಾಜ್ಯ ಪ್ರಧಾನ ಕಾರ್ಯದರ್ಶಿಗಳು, ರಾಷ್ಟ್ರೀಯ ಕಿಸಾನ ಸಂಘ, ಕೂನಬೇವು ಗ್ರಾಮ, ಚಿತ್ರದುರ್ಗ ತಾಲ್ಲೂಕು ಮತ್ತು ಜಿಲ್ಲೆ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ಇವರು (1) ಶ್ರೀ ಹೆಚ್. ರಾಘವ ರೆಡ್ಡಿ, ಹಿಂದಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ತುರುವನೂರು ಗ್ರಾಮ, ಪಂಚಾಯತಿ, ಚಿತ್ರದುರ್ಗ ತಾಲ್ಲೂಕು ಮತ್ತು ಜಿಲ್ಲೆ (2) ಶ್ರೀ ಎಸ್.ಆರ್. ಕರಿಯಪ್ಪ, ಹಿಂದಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ತುರುವನೂರು ಗ್ರಾಮ, ಪಂಚಾಯತಿ, ಚಿತ್ರದುರ್ಗ ತಾಲ್ಲೂಕು ಮತ್ತು ಜಿಲ್ಲೆ (3)ಶ್ರೀಮತಿ ಆರ್. ಚೈತ್ರ, ಹಿಂದಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ತುರುವನೂರು ಗ್ರಾಮ, ಪಂಚಾಯತಿ, ಚಿತ್ರದುರ್ಗ ತಾಲ್ಲೂಕು ಮತ್ತು ಜಿಲ್ಲೆ (4) ಶ್ರೀ ಎಸ್.ಎಲ್. ಬಸವರಾಜು, ಹಿಂದಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ತುರುವನೂರು ಗ್ರಾಮ, ಪಂಚಾಯತಿ, ಚಿತ್ರದುರ್ಗ ತಾಲ್ಲೂಕು ಮತ್ತು ಜಿಲ್ಲೆ (5) ಶ್ರೀ ಎನ್.ಬಿ. ಉಮಾಕಾಂತ, ಹಿಂದಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ತುರುವನೂರು ಗ್ರಾಮ, ಪಂಚಾಯತಿ, ಚಿತ್ರದುರ್ಗ ತಾಲ್ಲೂಕು ಮತ್ತು ಜಿಲ್ಲೆ (6) ಶ್ರೀ ಟಿ.ಜಿ. ಸುರೇಶ, ಹಿಂದಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ತುರುವನೂರು ಗ್ರಾಮ, ಪಂಚಾಯತಿ, ಚಿತ್ರದುರ್ಗ ತಾಲ್ಲೂಕು ಮತ್ತು ಜಿಲ್ಲೆ (7) ಶ್ರೀ ಎಂ. ಮೋಹನದಾಸ, ಹಿಂದಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ತುರುವನೂರು ಗ್ರಾಮ, ಪಂಚಾಯತಿ, ಚಿತ್ರದುರ್ಗ ತಾಲ್ಲೂಕು ಮತ್ತು ಜಿಲ್ಲೆ ಮತ್ತು (8) ಶ್ರೀ ಎಂ.ಎಸ್. ಮಲ್ಲಿಕಾರ್ಜುನ, ಹಿಂದಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ತುರುವನೂರು ಗ್ರಾಮ, ಪಂಚಾಯತಿ, ಚಿತ್ರದುರ್ಗ ತಾಲ್ಲೂಕು ಮತ್ತು ಜಿಲ್ಲೆ (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ದಾಖಲಿಸಿ, ಕರ್ನಾಟಕ ಲೋಕಾಯುಕ್ತ ಅಧಿನಿಯಮದಡಿ ತನಿಖೆಗಾಗಿ ಕೈಗೆತ್ತಿಕೊಳ್ಳಲಾಯಿತು.

**2. ದೂರಿನ ಸಂಕ್ಷಿಪ್ತ ವಿವರ:**

ತುರುವನೂರು ಗ್ರಾಮ ಪಂಚಾಯತಿಯಲ್ಲಿ 2008 ರಿಂದ 2014 ರ ವರೆಗೆ ಲೆಕ್ಕ ಪರಿಶೋಧನೆ ಮಾಡಲಾಗಿದ್ದು, ಸಹಾಯಕ ನಿಯಂತ್ರಕರು, ಸ್ಥಳೀಯ ಲೆಕ್ಕ ಪರಿಶೋದನಾ ವರ್ತುಲ ಚಿತ್ರದುರ್ಗ ಇವರ ವರದಿಯ ಪ್ರಕಾರ ಇದುವರೆಗೂ ರೂ.2,01,02,712/- ಆಕ್ಷೇಪಣೆಯ ಮೊಬಲಗು ಆಗಿದ್ದು, ವಸೂಲಾತಿ ಬಾಕಿ ಇರುವ ಹಣ ರೂ.77,996/- ಇರುತ್ತದೆ. ವಸೂಲಾದ ಕಂದಾಯದ ಮೊಬಲಗನ್ನು ಗ್ರಾಮ ಪಂಚಾಯತಿ ನಿಧಿಗೆ ಜಮಾ ಮಾಡದೇ ಇರುವುದು ಕಂಡುಬಂದಿದ್ದು ಎಲ್ಲಾ ಎದುರುದಾರರು ಕಂದಾಯದ ಹಣವನ್ನು ಗ್ರಾಮ ಪಂಚಾಯತಿಗೆ ಕಟ್ಟದೇ ಕರ್ತವ್ಯಲೋಪ ಎಸಗಿದ್ದಾರೆ. ಆದ್ದರಿಂದ, ಎದುರದಾರರ ವಿರುದ್ಧ ಆಡಿಟ್ ವರದಿಯಂತೆ ಕ್ರಮ ತೆಗೆದುಕೊಳ್ಳಬೇಕೆಂದು ಕೋರಿರುತ್ತಾರೆ.

3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ಚಿತ್ರದುರ್ಗ ಇವರಿಗೆ ದೂರಿನ ಮೇಲೆ ತನಿಖೆ ಕೈಗೊಂಡು ವರದಿಯನ್ನು ಸಲ್ಲಿಸುವಂತೆ ನಿರ್ದೇಶಿಸಲಾಗಿತ್ತು.

(ಎ) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ಚಿತ್ರದುರ್ಗ ಇವರು ವರದಿಯನ್ನು ಸಕಾಲದಲ್ಲಿ ಸಲ್ಲಿಸದೇ ಇದ್ದುದ್ದರಿಂದ, ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್ ಚಿತ್ರದುರ್ಗ ಮತ್ತು ಉಪಕಾರ್ಯದರ್ಶಿಗಳು, ಜಿಲ್ಲಾ ಪಂಚಾಯತ್ ಚಿತ್ರದುರ್ಗ ಇವರನ್ನು ಖುದ್ದು ಹಾಜರುಪಡಿಸಿಕೊಳ್ಳಲಾಗಿದೆ. ಗೌರವಾನ್ವಿತರ ಮುಂದೆ ಸದರಿ ಅಧಿಕಾರಿಗಳು, ಅಡಹಕ್ ಕಮಿಟಿಗಳ ಸಭೆಗಳನ್ನು ಮಾಡಲಾಗಿದೆ. ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಅನುಬಂಧ-1 ರಿಂದ 4 ರಂತೆ ದೋಷಾರೋಪಣ ಪಟ್ಟಿಯನ್ನು ಕೊಡಲಾಗಿದೆ. ಬಾಕಿ ಹಣ ವಸೂಲಾತಿಗೆ ಆದೇಶವನ್ನು ಮಾಡಲಾಗಿದೆ. ಹಣ ವಸೂಲಾತಿಗೆ ಮತ್ತು ಆಕ್ಷೇಪಣಾ ಮೊತ್ತ ತಿರುವಳಿಗೆ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ ಅಂತ ತಿಳಿಸಿದ್ದಾರೆ.

(ಬಿ) ಮುಂದುವರೆದ ಇಲಾಖಾ ವಿಚಾರಣಾ ವರದಿಯನ್ನು ಸಲ್ಲಿಸುವಂತೆ ನಿರ್ದೇಶಿಸಿದಾಗ, ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್ ಚಿತ್ರದುರ್ಗ ಇವರು ಅಡಹಕ್ ಕಮಿಟಿ ಸಭೆಗಳಲ್ಲಿ ರೂ.50,649/- ಗಳನ್ನು ವಸೂಲಿ ಮಾಡಲಾಗಿದೆ. ಆಕ್ಷೇಪಣಾ ಮೊತ್ತವನ್ನು ರೂ.1,57,00,000/- ಇಳಿಸಲಾಗಿದೆ ಅಂತ ತಿಳಿಸಿದ್ದಾರೆ.

4. ಪ್ರತಿಯೊಬ್ಬ ಅಧಿಕಾರಿಗಳಿಂದ ಅಥವಾ ಪಂಚಾಯತಿ ಸದಸ್ಯರಿಂದ ಎಷ್ಟು ವಸೂಲಾತಿ ಹಣ ಸರ್ಕಾರಕ್ಕೆ ಬರಬೇಕಾಗಿದೆ ಎನ್ನುವ ಬಗ್ಗೆ ವರದಿಯನ್ನು ಸಲ್ಲಿಸಲು ನಿರ್ದೇಶಿಸಲಾಗಿತ್ತು.

(ಎ) ಕಾರ್ಯನಿರ್ವಾಹಕ ನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್ ಚಿತ್ರದುರ್ಗ ಇವರು ವರದಿಯನ್ನು ಸಲ್ಲಿಸಿದ್ದು, ಕೆಲಸದಲ್ಲಿರುವ ಸಿಬ್ಬಂದಿಗಳ ವೇತನದಿಂದ ಹಣ ಕಟಾವಣೆ ಮಾಡಲಾಗುತ್ತಿದೆ. ಶ್ರೀ ಮೋಹನ ದಾಸ ಎನ್ನುವವರು ಅಮಾನತ್ತು ಆಗಿದ್ದರಿಂದ, ಅವರ ವೇತನ ಕಟಾವಣೆ ಮಾಡಲು ಆಗುತ್ತಿಲ್ಲ. ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ ಕಲಂ 254 ಮತ್ತು 255(2) ರಂತೆ ಸ್ಥಿರ ಆಸ್ತಿಗಳನ್ನು ವಿಲೇಪಡಿಸಿ ವಸೂಲಿ ಮಾಡಲು ಅಧಿಕೃತ ಜ್ಞಾಪನ ಪತ್ರವನ್ನು ಹೊರಡಿಸಲಾಗಿದೆ ಅಂತ ತಿಳಿಸಿದ್ದಾರೆ.

5. ಎದುರುದಾರರ ವಿರುದ್ಧ ಪ್ರಾರಂಭಿಸಿರುವ ಇಲಾಖಾ ವಿಚಾರಣೆ ಮತ್ತು ಮುಂದುವರೆದಂತೆ ಏನು ಕ್ರಮ ಕೈಗೊಳ್ಳಲಾಗಿದೆ ಎನ್ನುವ ಬಗ್ಗೆ 2 ತಿಂಗಳಲ್ಲಿ ವರದಿಯನ್ನು ಸಲ್ಲಿಸುವಂತೆ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್ ಚಿತ್ರದುರ್ಗ ಇವರಿಗೆ ಸೂಚಿಸಲಾಗಿತ್ತು.

(ಎ) ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್ ಚಿತ್ರದುರ್ಗ ಇವರು ಪುನಃ ಮುಂದುವರೆದ ವರದಿಯನ್ನು ಸಲ್ಲಿಸಿದ್ದು, ಇಲಾಖಾ ವಿಚಾರಣೆಯ ಪ್ರಕ್ರಿಯೆ ಚಾಲ್ತಿಯಲ್ಲಿದೆ ಅಂತ ತಿಳಿಸಿದ್ದಾರೆ. ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತ್ ಚಿತ್ರದುರ್ಗ ಇವರನ್ನು ವಿಚಾರಣಾಧಿಕಾರಿಯನ್ನಾಗಿ ಮತ್ತು ಸಹಾಯಕ ಲೆಕ್ಕಾಧಿಕಾರಿಗಳು ತಾಲ್ಲೂಕು ಪಂಚಾಯತ್ ಚಿತ್ರದುರ್ಗ ಇವರನ್ನು ಮಂಡನಾಧಿಕಾರಿಯನ್ನಾಗಿ ಮಾಡಿ ಆದೇಶವನ್ನು ಹೊರಡಿಸಲಾಗಿದೆ. ಇಲಾಖಾ ವಿಚಾರಣೆ ಮುಕ್ತಾಯವಾದ ನಂತರ ವರದಿಯನ್ನು ಸಲ್ಲಿಸಲಾಗುವುದು ಅಂತ ತಿಳಿಸಿದ್ದಾರೆ.

6. ಈ ಪ್ರಕರಣದ ಸಂಪೂರ್ಣ ಕಡತವನ್ನು ಪರಿಶೀಲಿಸಿದ್ದೇನೆ. ಎದುರುದಾರರ ವಿರುದ್ಧ ಈಗಾಗಲೇ ಇಲಾಖಾ ವಿಚಾರಣೆಯನ್ನು ಪ್ರಾರಂಭಿಸಿದ್ದು ಕಂಡುಬರುತ್ತದೆ. ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ ಕಲಂ 254 ಮತ್ತು 255(2) ರಂತೆ ಸ್ಥಿರ ಆಸ್ತಿಗಳನ್ನು ವಿಲೇಪಡಿಸಿ ವಸೂಲಿ ಮಾಡಲು ಅಧಿಕೃತ ಜ್ಞಾಪನ ಪತ್ರವನ್ನು ಹೊರಡಿಸಿರುವುದು ಕಂಡುಬರುತ್ತದೆ.

7. ಆದ್ದರಿಂದ, ಚಿತ್ರದುರ್ಗ ಜಿಲ್ಲೆಯ ತುರುವನೂರು ಗ್ರಾಮ ಪಂಚಾಯತಿಯಲ್ಲಿ 2008 ರಿಂದ 2014 ರ ವರೆಗೆ ಇರುವ ಆಕ್ಷೇಪಣಾ ಮೊತ್ತ ರೂ.1,57,00,000/- ಗಳ ತಿರುವಳಿಗೆ ಎಲ್ಲಾ ಸೂಕ್ತ ಕ್ರಮಗಳನ್ನು ಅನುಸರಿಸತಕ್ಕದ್ದು ಮತ್ತು ಬಾಕಿ ಉಳಿದಿರುವ ವಸೂಲಾತಿ ಮೊತ್ತ ರೂ.27,347/- ಗಳ ಹಣವನ್ನು ಸಂಬಂಧಪಟ್ಟವರಿಂದ ಬಡ್ಡಿ ಸಹಿತ ವಸೂಲಿ ಮಾಡಿ ಸರ್ಕಾರದ

ಬೊಕ್ಕಸಕ್ಕೆ ಜಮಾ ಮಾಡಿಕೊಳ್ಳಲು ಕರ್ನಾಟಕ ಲೋಕಾಯುಕ್ತ ಅಧಿನಿಯಮ ಕಲಂ 12(1) ಅಡಿಯಲ್ಲಿ ಎದುರುದಾರರ ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

8. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರ ಪ್ರಕಾರ, ಶಿಸ್ತು ಪ್ರಾಧಿಕಾರವು ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(1)ರ ವರದಿಯಲ್ಲಿನ ಶಿಫಾರಸ್ಸಿಗನುಗುಣವಾಗಿ ಕ್ರಮ ಕೈಗೊಂಡ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ ಒಂದು ತಿಂಗಳ ಅವಧಿಯೊಳಗೆ ಈ ಪ್ರಾಧಿಕಾರಕ್ಕೆ ತಿಳಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 15/2/18

(ನ್ಯಾಯಮೂರ್ತಿ **ಸುಭಾಷ್ ಬಿ. ಅಡಿ**)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ